

# ನಿಮ್ಮ ಅಧಿಕಾರ / ಹಕ್ಕನ್ನು ತಿಳಿದಿರಿ

## ನಿಮ್ಮ ಒಬ್ಬ ಪುರುಷರೊಡನೆ ಲೈಂಗಿಕ ಕ್ರಿಯೆ ಹೊಂದಿರುವ ಪುರುಷರೆ ?

## ನೀವು ನಿಮ್ಮ ಹಕ್ಕನ್ನು ಬಲ್ಲಿರಾ ?

ಭಾರತದಲ್ಲಿ ಪುರುಷರು ಇತರ ಪುರುಷರೊಡನೆ ಲೈಂಗಿಕ ಸಂಪರ್ಕ ಹೊಂದುವುದನ್ನು ಅಪರಾದವೆಂದು ಪರಿಗಣಿಸಲಾಗಿದೆ ಎಂಬುದು ನಿಮಗೆ ತಿಳಿದಿದಿಯೆ? ಅದನ್ನು ಭಾರತೀಯ ನೀತಿ ಸಂಹಿತೆಯ 377ನೇ ವಿಧಿ ನಿಯಮ ಹೇಳುತ್ತದೆ ಈ ನಿಯಮಾನುಸಾರ ಅನೈಸರ್ಗೀಕ ಸಂಭೋಗದಲ್ಲಿ ತೊಡಗಿದವರನ್ನು ಜೀವಾವಧಿ ಶಿಕ್ಷೆ ನೀಡುವ ತನಕ ಅವಕಾಶ ನೀಡಿದೆ ಅನೈಸರ್ಗೀಕ ಕ್ರಿಯೆಯನ್ನು ಯಾವುದೆಂದು ಗುರುತಿಸಿ ಹೇಳದಿದ್ದರೂ ಸಹ ಗುದ ಮೈಥುನ ಮತ್ತು ಮುಖ ಮೈಥುನವನ್ನು ನ್ಯಾಯಾಲಯವು ಇದರಲ್ಲಿ ಸೇರಿಸದೆ. ಈ ಪ್ರಶ್ನೆಯು ಎಷ್ಟು ಸಮಂಜಸವಾದುದು.

## ಮಾನ್ಯವಾದುದು ಮತ್ತು ಅದನ್ನು ಪಾಲಿಸಲಾಗುತ್ತಿದೆಯೇ ?

ಈ ಶಾಸನವನ್ನು 1860ರಲ್ಲಿ ಆಂಗ್ಲರ ಆ ನೈಸರ್ಗಿಕ ಪುರುಷ ಮೈಥುನದ ನಿಯಮಾನುಸಾರ ಅಳವಡಿಸಿಕೊಳ್ಳಲಾಗಿತ್ತು. ಇಂಗ್ಲೆಂಡ್‌ರಲ್ಲಿ ಈ ಪುರುಷ ಮೈಥುನಿಗಳ ನಿಯಮವನ್ನು ತಿರಸ್ಕರಿಸಲಾಯಿತು. ಆದರೆ ಭಾರತದಲ್ಲಿ ಈ ನಿಯಮ ಈಗಲೂ ಪಾಲನೆಯಲ್ಲಿದೆ. ಇಂದಿನ ಅರಿಯುವಿಕೆಯ ಬದಲಾವಣೆಯಿಂದಾಗಿ, ಸಲಿಂಗಕಾಮದ ನಡವಳಿಕೆ ಅರ್ಥಪೂರ್ಣವಾಗಿರುವುದರಿಂದ ಭಾರತದಲ್ಲೂ ಸಹ ಈ ನಿಯಮವನ್ನು ನ್ಯಾಯಾಂಗದಿಂದ ತೆಗೆದು ಹಾಕಬೇಕೆಂಬ ಘೋಷಣೆ ಎದ್ದಿದೆ. ಭಾರತೀಯ ನ್ಯಾಯಾಂಗ ಆಯೋಗವು ಈ ಒಂದು ತಿರ್ಮಾನಕ್ಕೆ ಸಮ್ಮತಿಸೂಚಿಸಿ ಅದರ ಪರವಾಗಿದೆ. ಅಲ್ಲದೆ ಇದು ಗಣತಂತ್ರದ ಸಾಮಾನ್ಯ ಹಕ್ಕುಗಳಿಗೆ ವಿರೋಧವಾಗಿದ್ದು ಪುರುಷರು ಪುರುಷರೊಡನೆ ಲೈಂಗಿಕ ಕ್ರಿಯೆ ನಡೆಸುವ ಸ್ವಾತಂತ್ರ್ಯಕ್ಕೆ ಅಡ್ಡಿಯಾಗುವಂತಿದೆ.

ಈ ನಿಯಮವನ್ನು ಅತಿ ವಿರಳವಾಗಿ ಜಾರಿಗೆ ತರಲಾಗಿದೆ. ಆರಕ್ಷಕರು ಮತ್ತು ಇತರೆ ನ್ಯಾಯಾಂಗ ಪರಿಪಾಲನೆಗಾಗಿ ಇರುವ ಸಂಸ್ಥೆಗಳು ಪುರುಷರು ಇತರ ಪುರುಷರೊಡನೆ ಲೈಂಗಿಕ ಸಂಬಂಧ ಹೊಂದಿರುವುದನ್ನು ಕಂಡಾಗ ಅವರನ್ನು ಹಿಂಸೆಗೆ, ಬ್ಲಾಕ್‌ಮೇಲ್ ಮಾಡಿ ಹಣಸುಲಿಗೆ ಅವಮಾನ ಮಾಡುತ್ತಿದ್ದಾರೆ. ಇಂತಹ ಜನರು ಭೇಟಿಯಾಗುವ ಸ್ಥಳಗಳಲ್ಲಿ ಹೋಗಿ ಬಂಧಿಸಿ ಅವರನ್ನು ಅವಮಾನಿಸುವುದು, ಸುಲಿಗೆ ಮಾಡುವುದು ಸಾಮಾನ್ಯ ಸಂಗತಿಯಾಗಿದೆ ಈ ನಿಯಮವು ಇರುವವರಿಗೆ, ಹೆಚ್ ಐ ವಿ ಮತ್ತು ಏಯ್‌ಡ್ಸ್‌ಗಳನ್ನು ನಿಯಾಂತ್ರಿಸುವ, ನಿರ್ಮೂಲ ಮಾಡುವ ಕ್ರಿಯೆ – ಪುರುಷರು ಇತರ ಪುರುಷರೊಡನೆ ಲೈಂಗಿಕ ಸಂಬಂಧ ಹೊಂದುವುದು, ಇವುಗಳನ್ನು ಫಲಕಾರಿಯಾಗಿ ಮಾಡಲಾಗದೆ ಕಾಂಡೂಮ್‌ಗಳನ್ನು ಹಂಚುವಿಕೆ, ಪುರುಷರು ಇತರ ಪುರುಷರೊಡನೆ ಸಂಭೋಗ ಸುಖ ಹೊಂದುವಾಗ ಅನುಸರಿಸಬೇಕಾದ ಸುರಕ್ಷಿತ ವಿದಾನಗಳನ್ನು ತಿಳಿಹೇಳುವುದು ಇವುಗಳನ್ನು ನಿಯಮದ ಪ್ರಕಾರ

ಅಪರಾಧವಾಗಿದೆ. ಪುರುಷರು ಇತರ ಪುರಷರೊಡನೆ ಲೈಂಗಿಕ ಸಂಪರ್ಕ ಹೊಂದುವ ಹಕ್ಕಿನ ಜೊತೆಗೆ ಅವರ ಇತರ ಮಾನವೀಯ, ಸಾಮಾನ್ಯಹಕ್ಕಿಗಳಿಗೂ ತೊಂದರೆಯಾಗಿ ಇದನ್ನು ರಕ್ಷಿಸಲಾಗದೆ, ಉತ್ತೇಜಿಸಲಾಗದೆ ಇರುವಂತಿದೆ.

ಹೈಕೋರ್ಟ್ ಅಥವಾ ಸುಪ್ರಿಮ್ ಕೋರ್ಟ್‌ಗಳ ಈ ನಿಯಮವನ್ನು ತಪ್ಪೆಂದು, ಸರಿಯಿಲ್ಲವೆಂದು ನಿಷೇಧಿಸಲು ಆಜ್ಞೆ ನೀಡಬಹುದು. ಆದರೆ ಈವರೆಗೂ ಅಂತಹ ತೀರ್ಪು ಹೊರಬಂದಿಲ್ಲ ಈಗಲೂ ಇದರ ಬಗ್ಗೆ ದೆಹಲಿಯ ಹೈಕೋರ್ಟ್‌ನಲ್ಲಿ ವಾದ ವಿವಾದಗಳು ಸಾಗುತ್ತಿವೆ.

ಆದರೆ

**ಇದರರ್ಥವೇನೆಂದರೆ ನಮಗೆ ಹಕ್ಕಿಲ್ಲವೆಂದೆ ?**

ಇಲ್ಲ ನಿಮಗೆ ಹಲವಾರು ಹಕ್ಕುಗಳಿವೆ. ಅದನ್ನು ನ್ಯಾಯೊಂಗವು ಕಸಿಯಲಾರದು. ಆದೇ ಸಾಮನ್ಯ ಹಕ್ಕುಗಳು. ಅದನ್ನು ನಮ್ಮ ನ್ಯಾಯಾಂಗುವ ನಮಗೆ ನೀಡಿದೆ ಇದು ಜನ ಸಾಮಾನ್ಯರ ಅವಶ್ಯಕವಾದ ಮೂಲಭೂತ ಹಕ್ಕುಗಳಾಗಿವೆ ಇದನ್ನು ಹೈಕೋರ್ಟ್ ಆಗಲಿ ಸುಪ್ರಿಂಕೋರ್ಟ್ ಆಗಲ್ಲಿ ತಪ್ಪೆಂದು ಹೇಳಿ ಉಲ್ಲಂಘಿಸಲಾಗದು. ನೀವು ತಿಳಿಸ ಬೇಕಾದ ಸಾಮಾನ್ಯ ಹಕ್ಕುಗಳ ಕೆಳಗಿನಂತಿವೆ.

**ಸಮಾನತೆಯಹಕ್ಕು :** (ನಿಯಮ 14) ಇದರಪ್ರಕಾರ ಎಲ್ಲ ನಾಗರೀಕರೂ ಪ್ರಜೆಗಳು ಸಮನದ ಹಕ್ಕನ್ನು ಹೊಂದಿರುತ್ತಾರೆ - ಪುರಷರು ಇತರ ಪುರುಷರನ್ನು ಲೈಂಗಿಕ ಸಂಪರ್ಕಕ್ಕೆ ಸೆಳೆದರೂ ಸಹ - ಅವರನ್ನು ಸಮಾನತೆಯಿಂದ ಕಾಣತಕ್ಕದ್ದು, ಅವರಿಗೂ ಸಮಾನ ರಕ್ಷಣೆ ಪಡೆಯುವ ಹಕ್ಕಿದೆ.

ಈ ನಿಯಾಮವನ್ನು ರಾಜ್ಯವು ನಿಷೇಧಿಸದೆ (ರಾಜ್ಯವೆಂದರೆ ಸರ್ಕಾರ, ಹಾಗೂ ಸರ್ಕಾರಿ ಸಂಘ ಸಂಸ್ಥೆಗಳು, ಆರಕ್ಷಕರು ಇತ್ಯಾದಿ) ಯಾವುದೇ ಭೇದಬಾವವಿಲ್ಲದೆ ವರ್ತಿಸಬೇಕೆಂದು ನ್ಯಾಯಾಂಗದಲ್ಲಿ ಹೇಳಲಾಗಿದೆ. ಪುರುಷರು ಇತರ ಪುರುಷರೊಡನೆ ಲೈಂಗಿಕ ಸಂಬಂಧ ಹೊಂದಿರುವುದನ್ನು ಪುರಾತನಕಾಲದಿಂದಲೂ ಪಕ್ಷಪಾತದಿಂದ ಕಾಣಲಾಗುತ್ತದೆ ಎಂಬುದು ಮುಖ್ಯಸಂಗತಿಯಾಗಿದೆ.

ಇತರೆ ಸ್ವತಂತ್ರ್ಯತೆಯ ಹಕ್ಕುಗಳು (ನಿಯಮ 19). ಈ ನಿಯಮದಡಿಯಲ್ಲಿ ನಾಗರೀಕರಿಗೆ ಹಲವಾರು ಸ್ವಾತಂತ್ರ್ಯಗಳನ್ನು ನೀಡಲಾಗಿದೆ. ಅವುಯಾವುದೆಂದರೆ :

- ಮಾತಾನಡುವ, ಅಭಿಪ್ರಾಯವನ್ನು ವ್ಯಕ್ತ ಪಡಿಸುವ ಸ್ವಾತಂತ್ರ್ಯ. ನೀವು ಕೋತಿಯಾಗಿದ್ದು ನೀವು ಇಚ್ಚಿಸಿದಂತೆ ವೇಷಧರಿಸಬಹುದು, ಸ್ತ್ರೀವೇಶ ಹಾಕಿಕೊಳ್ಳಬಹುದು, ಅಲಂಕರಿಸರಿಕೊಳ್ಳಬಹುದು. ನಿಮ್ಮ ಇಷ್ಟದಂತೆ ಅಭಿಪ್ರಾಯ ವ್ಯಕ್ತ ಪಡಿಸಬಹುದು. ಇವುಗಳಿಗಾಗಿ ನಿಮ್ಮನ್ನು ಶಿಕ್ಷಿಸಲೂ

ಅವಮಾನಿಸಲು ಸಾಧ್ಯವಿಲ್ಲ. ಹಾಗೇನಾದರೂ ಇತರರು ನಡೆದುಕೊಂಡಲ್ಲಿ ನೀವು ಆರಕ್ಷಕರಿಂದ ರಕ್ಷಣೆ ಪಡೆಯಬಹುದು. ಅಪಮಾನಿಸುವವರ ವಿರುದ್ಧ ದೂರು ನೀಡಬಹುದು. ಅವರನ್ನು ನ್ಯಾಯಾಂಗ ತೀರ್ಮಾನಕ್ಕೆ ಕರೆದೊಯ್ಯಬಹುದು. ಇದರಿಂದ ಅರ್ಥಬಾಗವು ದೇನೆಂದರೆ ನೀವು ಯಾವುದೇ ಭಯ ಭೀತಿಯಿಲ್ಲದೆ ನಿಮ್ಮಿಷ್ಟ ಬಂದಂತೆ ವರ್ತಿಸುವ ಸ್ವಾತಂತ್ರ್ಯ ಉಂಟು.

- ಶಾತಿಯುತಾವಾಗಿ, ಶಸ್ತ್ರಾಸ್ತ್ರಗಳನ್ನು ಹೊಂದದೆ ಕೂಟ, ಸಮಾಗಮವನ್ನು ಏರ್ಪಡಿಸಬಹುದು. ಅಂದರೆ ಪುರುಷರು ಇತರ ಪುರುಷರೊಡನೆ ಲೈಂಗಿಕ ಸಂಪರ್ಕ ಹೊಂದಬಯಸುವವರು ಭೇಟಿಯಾಗುವಂತಹ ಸ್ಥಳಗಳಿಗೆ ಹೋಗಿ ಸಾರ್ವಜನಿಕ ಸ್ಥಳಗಳಲ್ಲಿ ಬೇಟಿಯಾಗಬಹುದು ಆದರೆ ಇದರಲ್ಲಿ ಯಾವುದೇ ರೀತಿಯ ಅಶ್ಲೀಲತೆಯ ಪ್ರದರ್ಶನ ಅಶಾಂತಿ ಉಂಟುಮಾಡುವ ಪ್ರಸಂಗ ಮತ್ತು ಇತರರಿಗೆ ತೊಂದರೆ ನೀಡುವ ಉದ್ದೇಶವಿರಬಾರದು. ನೀವು ಸಾರ್ವಜನಿಕವಾಗಿ ಸಭೆ, ಸಮಾರಂಭಗಳನ್ನು ಮಾಡಲು ಅವಕಾಶವಿದೆ ನಿಷೇದಾಜ್ಞೆಯನ್ನು ಹೊರಡಿಸದಿದ್ದಲ್ಲಿ ಯಾವುದೇ ಆರಕ್ಷಕದಳವು ಈ ಸ್ಥಳಗಳಿಗೆ ಬಂದು ಅಡ್ಡಿಪಡಿಸಿ ಅಪಯಾನಮಾಡಲಾಗದು.

## ಸಂಘ ಸಂಸ್ಥೆಗಳನ್ನು ಮುಕ್ತವಾಗಿ ಸ್ತಾಪಿಸುವಹಕ್ಕು ಇದೆ!

- ಈ ಒಂದು ಸ್ವಾತಂತ್ರದ ಪ್ರಕಾರ ನೀವು ಇತರ ಸಹಕಾರ ನೀಡುವ ಸಂಸ್ಥೆ, ಸಂಘಗಳನ್ನು ಒಟ್ಟಿಗೂಡಿಸಿ, ಸರ್ಕಾರೇತರ ಸಂಸ್ಥೆಗಳನ್ನು ಸ್ಥಾಪಿಸಬಹುದು. ಈ ಸಹಾಯಕ ಸಂಸ್ಥೆಗಳಿಂದ ಎಲ್ಲಿಯವರೆಗೂ ಅನೈತೀಕ ಚಟುವಟಿಕೆಗಳು ಸಾಗುವುದಿಲ್ಲವೋ ಅಲ್ಲಿಯವರೆಗೂ ಅದಕ್ಕೆ ಸರ್ಕಾರದಿಂದಾಗಲಿ. ಆರಕ್ಷಕರಿಂದಾಗಲಿ ಯಾವುದೇ ರೀತಿಯ ಅಡೆತಡೆ ಅಪಮಾನ ಉಂಟಾಗಲಾರದು.

## ದೇಶದಾದ್ಯಂತ ಸ್ವತಂತ್ರವಾಗಿ ಚಲಿಸುವ ಹಕ್ಕು

- ಈ ನಿಯಮಾನುಸಾರ ನೀವು ಭಾರತದ ಯಾವ ಭಾಗಕ್ಕೆ ಬೇಕಾದರೂ ಸ್ವತಂತ್ರವಾಗಿ ಚಲಿಸಬಹುದು. ಕೆಲವು ಸ್ಥಳಗಳಲ್ಲಿ ಸಾರ್ವಜನಿಕ ವಿಹಾರ ಸ್ಥಳ, ಉದ್ಯಾನಗಳು ಪುರುಷರು ಇತರ ಪುರಷರನ್ನು ಲೈಂಗಿಕ ಸಂಪರ್ಕಕ್ಕೆ ಸೆಳೆಯುವ ತಾಣಗಳು, ಸಾರ್ವತ್ರಿಕವಾಗಿ ಬರೆಯುವ ಸ್ಥಳಗಳನ್ನು ನಿಮಗೆ ನಿಷೇದಿಸಬಹುದು. ನೀವು ಪುರುಷ ಲೈಂಗಿಕ ಕಾರ್ಯಕರ್ತರಾಗಿದಲ್ಲಿ ನಿಮ್ಮನ್ನು ಅಂತಹ ಸ್ಥಳದಿಂದ ಹೊರಗೆ ಹಾಕಲಾಗದು ಅಥವಾ ನಿಮ್ಮ ಚಲನವಲನಗಳ ಮೇಲೆ ನಿಷೇಧ ತರಲಾಗದು. ಏನೇ ಆದರೂ ನೀವು ಸಾರ್ವಜನಿಕವಾಗಿ, ಎಲ್ಲರಿಗೂ ಕಾಣವಂತೆ ಲೈಂಗಿಕ ಸಂಭೋಗಕ್ರಿಯೆಯಲ್ಲಿ ತೊಡಗಿದಲ್ಲಿ ಅಶ್ಲೀಲತೆ ಕಾಯಿದೆಯಡಿಯಲ್ಲಿ ನಿಮ್ಮನ್ನು ಅಪರಾಧಿಯೆಂದು ತಿರ್ಮಾನಿಸಿ ಶಿಕ್ಷೆಗೆ ಗುರಿಪಡಿಸಬಹುದು. ನೈಜ ಲೈಂಗಿಕ ಕ್ರಿಯೆಯನ್ನು ಸಾರ್ವಜನಿಕವಾಗಿ ನಡೆಸುವುದು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ನಿಂತು ಆಕರ್ಷಿಸಿ, ಸೆಳೆದು, ಆಹ್ವಾನಿಸುವುದು ಇವುಗಳನ್ನು ಅನೈತಿಕ ಕ್ರಿಯೆಗಳೆಂದು ಪರಿಗಣಿಸಿ ಶಾಸನದ ನಿಯಮಗಳ ಪ್ರಕಾರ ಕೆಸ್ ದಾಖಲು ಮಾಡಬಹುದು.

**ಭಾರತದ ಯಾವುದೇ ಸ್ಥಳದಲ್ಲಾದರೂ ನೆಲೆಸುವ ಹಕ್ಕು ಇದೆ**

- ಇದರ ಪ್ರಕಾರ ನೀವು ಭಾರತದ ಯಾವ ಭಾಗದಲ್ಲಾದರೂ ವಸತಿ ಹೊಡಬಹುದು. ನೀವು ನ್ಯಾಯ ಬದವಾಗಿ ಮನೆಯನ್ನು ಖರೀದಿಸಿವಾಸವಾಗಿದ್ದಲ್ಲಿ - ನೀವು ಪುರುಷರನ್ನು ಲೈಂಗಿಕ ಸಂಪರ್ಕಕ್ಕೆ ಆಕರ್ಷಿಸುವ ಇತರ ಪುರುಷರಾಗಿದ್ದರೂ ಸಹ ನಿಮ್ಮನ್ನು ಮನೆಯಿಂದ ಹೊರಹಾಕಲಾಗದು. ಹಾಗೇನಾದರೂ ನಿಮ್ಮನು ಅಪಮಾನಿಸಿ, ಮನೆಯಿಂದ ಹೊರಹಾಕಲು ಬಂದಲ್ಲಿ ನೀವು ಆರಕ್ಷಕರಿಗೆ ಈ ಸಂಬಂಧ ದೂರು ನೀಡಿ ರಕ್ಷಣೆ ಪಡೆಯಬಹುದು.

**ಸ್ವಂತ ಉದ್ಯೋಗ, ವ್ಯಾಪಾರ, ವ್ಯವಹಾರವನ್ನು ನಡೆಸುವ ಸ್ವಾತಂತ್ರ್ಯ ಹಕ್ಕು ಇದೆ :**

- ಈ ಒಂದು ಸ್ವಾತಂತ್ರ್ಯವು ನಿಮಗೆ ಅತ್ಯಂತ ಪ್ರಮುಖವಾದುದು. ಅದರಲ್ಲೂ ನೀವು ಪುರುಷ ಲೈಂಗಿಕ ಕಾರ್ಯಕರ್ತರಾಗಿದ್ದರೆ ಇದು ಮುಖ್ಯವಾದುದು. ಲೈಂಗಿಕ ಕಾರ್ಯವು ಒಂದು ಉದ್ಯೋಗದಂತೆ ಮತ್ತು ಅದನ್ನು ಸಾಗಿಸಲು ನಿಮಗೆ ಸಂಪೂರ್ಣ ಹಕ್ಕು ಇದೆ. ಭಾರತೀಯ ನೀತಿ ಸಂಹಿತೆಯ 377 ನೇ ನಿಯಮವು ಮುಖ ಮೈಥುನ ಮತ್ತು ಗುದ ಮೈಥುನವನ್ನು ನ್ಯಾಯ ಬಾಹಿರವೆಂದು ತಿರ್ಮಾನಿಸಿ ಅನೈತಿಕ ಚಟುವಟಿಕೆ ಎಂದು ತೀರ್ಪಿತ್ತಿದ್ದರೂ ಲೈಂಗಿಕ ಸಂಪರ್ಕದ ವಿಷಯದಲ್ಲಿ, ಲೈಂಗಿಕ ಉದ್ಯೋಗಗಳಲ್ಲಿ ಇದು ಸಹಜವೆಂದು ಪುರುಷ ಲೈಂಗಿಕ ಕಾರ್ಯಕರ್ತರನ್ನು ಮುಕ್ತ ಗೊಳಿಸಲಾಗಿದೆ ಇದರರ್ಥವೆಂದರೆ ರಾಜ್ಯವು ಲೈಂಗಿಕ ಕ್ರಿಯೆಯನ್ನು ಅದರಲ್ಲೂ ಗುದ ಮೈಥುನ ಮತ್ತು ಮುಖ ಮೈಥುನವನ್ನು ಒಳಗೊಂಡಿದ್ದು. ಅದನ್ನು ಧೃಢಪಡಿಸಿದಾಗ ಅದು ಅಪರಾಧವಾಗುತ್ತದೆ. ಇಲ್ಲದಿದ್ದಲ್ಲಿ ಲೈಂಗಿಕ ಉದೋಗಿಗಳನ್ನು ಯಾವುದೇ ರೀತಿಯಲ್ಲಿ ಶಿಕ್ಷಿಸಲಾಗದು ಎಂದಿದೆ.

**ಗಮನಿಸಿ :** ಈ ಸ್ವಾತಂತ್ರ್ಯಗಳು ಸಂಪೂರ್ಣ ನಿರಂಕುಶವಾದದಲ್ಲ, ರಾಜ್ಯಾಂಗವು ಹಲವಾರು ನಿಷೇಧಗಳನ್ನು ತರಬಹುದು - ಸಾರ್ವಜನಿಕರ ಹಿತಸಕ್ತಿ, ಶೀಲತೆ, ನೈತೀಕತೆ ಇತ್ಯಾದಿಗಳನ್ನು ಗಮನಿಸಿ ತಡೆತರಬಹುದು. ಏನೇ ಆದರೂ ಪುರುಷರು ಇತರ ಪುರುಷರೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗುವ ವಿಷಯದಲ್ಲಿ ನಿಬಂಧನೆಗಳನ್ನು ಅಳವಡಿಸಲಾಗಿಲ್ಲ ನೀವು ಇದನ್ನು ಆನಂದಿಸಬಹುದು. ಇದಕ್ಕೆ ಯಾವ ನಿರ್ಬಂಧಗಳೂ ಇಲ್ಲ.

**ಅನೀತಿಯುತ ಶಿಕ್ಷೆಯ ವಿರುದ್ದ ಹೋರಾಡುವ ಹಕ್ಕು (ನಿಯ 20(1) :**

- ಅಪರಾಧವಲ್ಲದ ಯಾವುದೇ ಕಾರ್ಯಕ್ಕು ಜನರನ್ನು ಅನಾವಶ್ಯಕವಾಗಿ ಸ್ವೇಚ್ಛಾನುಸಾರ ಅನಿರ್ಭಂದಿತವಾಗಿ ಶಿಕ್ಷಿಸಲಾಗದು. ತಾಂತ್ರಿಕವಾಗಿ ಗುದ ಮೈಥುನ ಮತ್ತು ಮುಖಮೈಥುನಗಳು ನಿಯಮ 377ರ ಪ್ರಕಾರ ಅಪರಾಧವೆಂದಾದರೂ ಅದನ್ನು ಸೂಕ್ತ ಪ್ರಮಾಣಗಳೊಂದಿಗೆ ಸಾಕ್ಷಿಗಳೊಂದಿಗೆ ಋಜುವಾತು ಮಾಡಬೇಕು. ವಿಚಾರಣೆ ಆಗಿ ಸಾಬೀತಾದರೆ ಮಾತ್ರ ಶಿಕ್ಷೆ, ಏನೇ

ಆದರೂ ಗುದ ಮೈಥುನ ಮತ್ತು ಮುಖ ಮೈಥುನವನ್ನು ಸಾಬೀತು ಮಾಡುವುದು ಅತಿ ಪ್ರಯಾಸದ ಕೆಲಸ.

- ವ್ಯಕ್ತಿಸ್ವಾತಂತ್ರ್ಯ ಮತ್ತು ಜೀವದ ಹಕ್ಕು (ನಿಯಮ 21) : ಇದೊಂದು ಅತ್ಯಂತ ಮುಖ್ಯವಾದ ನಿಯಮಗಳಲ್ಲಿ ಒಂದು. ಈ ಮೂಲಭೂತ ನಿಯಮದ ಪ್ರಕಾರ ರಾಜ್ಯವು ಯಾವುದೇ ರೀತಿಯಲ್ಲಿ ಪ್ರಜೆಗಳ ಜೀವ ತೆಗೆಯಲಾಗದು ಮತ್ತು ಅವರ ಜೀವನದ ಗುಣಮಟ್ಟವನ್ನು ತಗ್ಗಿಸುವಂತಹ ಹೀನಕಾರ್ಯ ಮಾಡಲಾಗದು. ಅದರ ಪ್ರಕಾರ ನಿಮ್ಮ ವ್ಯಕ್ತಿ ಸ್ವಾತಂತ್ರ್ಯವನ್ನು ಕಸಿದುಕೊಳ್ಳಲಾಗದು, ಗೌರವ ಮನಕ್ಕೆ ಧಕ್ಕೆ ಬರುವಂತೆ ಅಪಮಾನಿಸಲಾರದು. ನೀವು ಅನೀತಿಯುತ ಕಾರ್ಯದಲ್ಲಿ ತೊಡಗಿರಬಾರದು. ಪುರುಷ ಪುರಷರ ಲೈಂಗಿಕತೆಯು ಮೂಲಭೂತವು ಅವಶ್ಯಕವು ಸಂತಸದಾಯಕವು. ನಿಮ್ಮ ಜೀವನದ ಗುಣಮಟ್ಟವೂ ಅದೇ ನಿಮ್ಮ ಜೀವನದ ಮೂಲಾಧಾರವೂ ಅಗಿರ ಬಹುದು. ಇಂತಹ ಪರಿಸ್ಥಿತಿಯಲ್ಲಿ ನಿಯಮವು ನಿಮಗೆ ರಕ್ಷಣೆ ನೀಡಿ ಅಸಮಾನಾದಿಂದ ಮುಕ್ತರಾಗಿ ಇಂತಹ ಲೈಂಗಿಕ ಕ್ರಿಯೆಯನ್ನು ಅಪರಾಧವೆಂದು ಹೇಳುವುದಿಲ್ಲ. ಆದರೆ ಇದನ್ನು ನ್ಯಾಯಾಲಯವು ಒಪ್ಪಿ ತೀರ್ಪನ್ನು ನೀಡಿ ಖಚಿತಗೊಳಿಸಬೇಕಾಗಿದೆ. ಇದು ಇನ್ನೂ ಪೂರ್ಣವಾಗಿಲ್ಲ.

ಕಾರಾಗೃಹವಾಸ ಮತ್ತು ಬಂಧಿಸುವುದರ ವಿರುದ್ಧ ರಕ್ಷಣೆ (ನಿಯಮ 22) ಈ ನಿಯಮವನ್ನು ನೀವು ತಪ್ಪದೆ ಅರಿತಿರಬೇಕು ಏಕೆಂದರೆ ಪೋಲಿಸರು ಪುರುಷ ಪ್ರೇಮಿಗಳನ್ನು ಅವರು ಬೇಟಿಯಾಗುವ ಸ್ಥಳಗಳಲ್ಲೇ ಬಂಧಿಸುವ ಸಾದ್ಯತೆಗಳಿವೆ ಈ ನಿಯಮದ ಪ್ರಕಾರ ಪೋಲಿಸರು ಅತಿಶೀಘ್ರವಾಗಿ ಯಾರನ್ನು ಯಾವ ಕಾರಣದಿಂದಾಗಿ ಬಂಧಿಸಿದ್ದಾರೆ ಎಂಬುದನ್ನು ತಿಳಿಸಬೇಕಾಗುತ್ತದೆ. ನಿಮ್ಮನ್ನು ಯಾವುದೇಕಾರಣದಿಂದ ಬಂಧಿಸಿದರೂ ನಿಮ್ಮನ್ನು 24 ಗಂಟೆಗಳೊಳಗೆ ನ್ಯಾಯಲಯದಲ್ಲಿ ನ್ಯಾಯಾದೀಶರ ಮುಂದೆ ವಿಚಾರಣೆಗಾಗಿ ಹಾಜರು ಪಡಿಸಬೇಕು. ನೀವು ಸಹ ನಿಮ್ಮ ಆಯ್ಕೆಯ ವಕೀಲರನ್ನು ಕಂಡು ವಿಷಯ ತಿಳಿಸಿ ನಿಮ್ಮ ಪರವಾಗಿ ವಾದ ಮಾಡಲು ಹೇಳಬಹುದು. ಈ ಬಗ್ಗೆ ವಿವರಗಳನ್ನು ನಿಮ್ಮ ಹಕ್ಕಿನ ವಿಷಯಗಳನ್ನು ನಂತರದಲ್ಲಿ ತಿಳಿಸಲಾಗುವುದು.

**ಇವಿಷ್ಟೆ ಹಕ್ಕುಗಳೇನು ನಮಗೆ ಇರುವುದು?**

- ನಿಜವಾಗಿ ನಿಮಗೆ ನಾಗರೀಕ ಮತ್ತು ಅಪರಾಧ ನಿಯಮಗಳ ಅಡಿಯಲ್ಲಿ ಹಲವಾರು ಹಕ್ಕುಗಳಿವೆ. ನಾಗರೀಕ ನಿಯಮದಡಿಯಲ್ಲಿ ನಿಮಗೆ ಆಸ್ತಿಗಳನ್ನು ಹೊಂದಿದಲು, ಸಾಮಾಜಿಕ ಚಟುವಟಿಕೆಗಳಲ್ಲಿ ಮುಕ್ತವಾಗಿ ಭಾಗವಹಿಸಲು, ಮತಹಾಕಲು, ಸಾರ್ವಜನಿಕ ವಾಹನಗಳಲ್ಲಿ, ಚಲಿಸಲು, ಸಂಪತ್ತು ಹೊಂದಲು, ಶಾಲಾ ಕಾಲೇಜುಗಳಿಗೆ ಹೋಗಲು ವಿವಾಹಾವಾಗಲು, ಮಕ್ಕಳನ್ನು ದತ್ತು ಪಡೆಯಲು (ನಿಮ್ಮ ವೈಯುಕ್ತಿಕ ಕಾಯಿದೆ ಇವಕ್ಕೆ ಅವಕಾಶ ನೀಡಿದಲ್ಲಿ ಮಾತ್ರ) ಇತ್ಯಾದಿ ಹಕ್ಕುಗಳು ನೀವು ಪುರುಷ ಪ್ರೇಮಿಗಳಾಗಿದ್ದರೂ ಇದ್ದೇ ಇದೆ ನಾಗರೀಕ ನಿಯಮ ಪ್ರಕಾರ ನಿಮಗಾಗಿರುವ ಸಷ್ಟವನ್ನು ಪರಿಹಾರ ರೂಪದಲ್ಲಿ ಪಡೆಯಲು ಅವಕಾಶವಿದೆ.

ಅಪರಾಧ ಕಾನೂನಿನಲ್ಲಿ ನಿಮಗೆ ಯಾವುದೇ ರೀತಿಯ ಮಾನಸಿಕ ಅಥವಾ ದೈಹೀಕ ಆಘಾತ ತೊಂದರೆ ಮಾಡಿದವರಿಗೆ ಶಿಕ್ಷೆ ಕೊಡಿಸುವ ಹಕ್ಕು ಇದೆ. ಈ ವಿಷಯದಲ್ಲಿ ನೀವು ತಿಳಿದಿರಬೇಕಾದುದು ಏನೆಂದರೆ ಯಾವುದೇ ರೀತಿಯ ಭಯೋತ್ಪಾದನೆ ಅಥವಾ ಹಿಂಸಾಚಾರವು ಶಿಕ್ಷಾರ್ಹ ಅಪರಾಧವೇ ಆಗಿದೆ ನೀವು ಪುರುಷ ಕಾಮಿಯಾಗಿದ್ದು ಈ ಕೆಳಗಿನ ರೀತಿಯಲ್ಲಿ ತೊಂದರೆಗೆ ಸಿಲುಕಬಹುದು.

- ನಿಮಗೆ ಭಾಧೀಕವಾಗಿ ಹಿಂಸಾಚಾರ ಮಾಡುವುದಾಗಿ ಹೆದರಿಸಬಹುದು ಅಥವಾ ದೈಹಿಕ ತೊಂದರೆ ಉಪಟಳ ನೀಡಬಹುದು.
- ನೀಮ್ಮನ್ನು ಅನವಶ್ಯಕವಾಗಿ ಬಂಧಿಸಿಡಬಹುದು, ಬೇಕೆಂದೇ ಮನೆಯವರೇ ಕೂಡಿ ಹಾಕಬಹುದು. ಅಥವಾ ಹೊರಗಿನವರು ನಿಮ್ಮನ್ನು ಮುಚ್ಚಿಡಬಹುದು.
- ಯಾರಾದರೂ ಹಣಕ್ಕಾಗಿ ನಿಮಗೆ ನೋವುಂಟು ಮಾಡಬಹುದು, ಗಾಯಮಾಡಬಹುದು ಅಥವಾ ನಿಮ್ಮಿಂದ ಕ್ಷಮಾಯೊಚನೆಗಾಗಿ ತೊಂದರೆ ನೀಡಬಹುದು.
- ನಿಮಗೆ ಇಷ್ಟವಿಲ್ಲದಿದ್ದರೂ ಇತರರು ಬಂದು ನಿಮ್ಮ ಜೊತೆಗೆ ಬಲವಂತವಾಗಿ ಬಲಾತ್ಕಾರದಿಂದ ಲೈಂಗಿಕ ಸಂಭೋಗ ನಡೆಸಬಹುದು.
- ಅವರುಗಳು ತಮ್ಮ ದೇಹವನ್ನು ಪ್ರದರ್ಶಿಸಿ ನಿಮ್ಮನ್ನು ಬ್ಲಾಕ್‌ಮೇಲ್ ಮಾಡಿ ಹೆದರಿಸಬಹುದು.
- ಬೇರೆಯವರು ಬೇರೆಕಾರಣಗಳಿಗಾಗಿ ನಿಮ್ಮನ್ನು ಹೆದರಿಸಿ ಅವಮಾನಿಸಬಹುದು.

ಇಂತಹವರ ವಿರುದ್ಧ ನೀವು ನ್ಯಾಯವಾದ ರೀತಿಯಲ್ಲಿ ಕ್ರಮತೆಗೆದುಕೊಂಡು ಅಪರಾಧ ಸಾಬೀತು ಪಡಿಸಿ ಶಿಕ್ಷೆಗೆ ಗುರಿ ಪಡಿಸಬಹುದು ಅಂತಹ ಅಪರಾಧವು ನ್ಯಾಯಾಸ್ಥಾನದ ವಿಚಾರಣೆಗೆ ಸರಿಯಾಗಿದೆಯೊ ಎಂಬುದನ್ನು ಮೊದಲು ವಿಚಾರಿಸಬೇಕಾಗುತ್ತದೆ.

ನ್ಯಾಯಸ್ಥಾನಕ್ಕೆ ಅರ್ಹ ಮತ್ತು ಅನರ್ಹ ಅಪರಾಧ ಎಂದರೇನು? ಇಂತಹ ಸಂದರ್ಭದಲ್ಲಿ ಯಾವರೀತಿ ನಡೆದು ಕೊಳ್ಳಬೇಕು?

ನ್ಯಾಯ ಸ್ಥಾನಕ್ಕೆ ಅರ್ಹ ಅಪರಾಧಗಳೆಂದರೆ ಪೋಲಿಸರು ಸ್ವತ : ವಿಚಾರಣೆ ನಡೆಸಿ ತಮ್ಮ ಇಚ್ಛೆಯಂತೆ ಅಪರಾಧ ದೃಡಪಟ್ಟ ನಂತರ ಬಂಧಿಸುವುದು. ನೀವು ಈ ರೀತಿಯಲ್ಲಿ ವಿಚಾರಣೇಯ ಅಪರಾಧ ಮಾಡಿದ್ದಲ್ಲಿ ನೀವು ದೂರನ್ನು ನೀಡಿ ಎಫ್ ಐ ಆರ್ ನ್ನು ದಾಖಲು ಮಾಡಬೇಕು. ಎಫ್ ಐ ಆರ್ (FIR) ಎಂಬುದು ವಿಚಾರಣೆಯ ಪ್ರಥಮಹಂತ. ಪೋಲಿಸರಾಗಲಿ ಇಂತಹ ಎಫ್ ಐ ಆರ್ (FIR) ಅನ್ನು ದಾಖಲಿಸದಿದಲ್ಲಿ ನೀವೇ ಸ್ವತಃ ಅದನ್ನು ಸೂಪರಿಟೆಂಡೆಂಟ್ ಆಫ್ ಪೋಲಿಸ್ ಅವರಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳಿಸಬಹುದು. ಆಗ ಇದೇ FIR ಎಂದು ತಿಳಿಯಬಹುದು. ಹೀಗೆ ಮಾಡಿದ ನಂತರವು ಪೋಲಿಸರು ಸೂಕ್ತ ಕ್ರಮ

ಕೈಗೊಳ್ಳದಿದ್ದಲ್ಲಿ ನೀವು ರಿಟ್ ಪೆಟಿಷನ್ ಅನ್ನು ಹೈಕೋರ್ಟಿನಲ್ಲಿ ದಾಖಲಿಸಬಹುದು ಮತ್ತು ಅವರನ್ನು ಎಫ್ ಐ ಆರ್ (FIR) ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಬಹುದು.

ನ್ಯಾಯ ಸ್ಥಾನಕ್ಕೆ ಅನರ್ಹವಾದ ಅಪರಾದದಲ್ಲಿ ಪೋಲಿಸರು ನ್ಯಾಯಧೀಶರ ಅಪ್ಪಣೆ ಪಡೆದ ನಂತರ ವಿಚಾರಣೆಯನ್ನು ನಡೆಸಬೇಕು. ಇಂತಹ ಸಮಯದಲ್ಲಿ ನ್ಯಾಯಲಯವು ಅರೆಸ್ಟ್ ವಾರಂಟ್ ನೀಡಿದಲ್ಲಿ ಮಾತ್ರ ಅಪರಾಧಿಯನ್ನು ಬಂದಿಸಬಹುದು. ಆದಕಾರಣ ಇಂತಹ ಸಂಧರ್ಭಗಳಲ್ಲಿ ನೀವು ಆರಕ್ಷ ಠಾಣೆಯ ಸಾಮಾನ್ಯ ದಿನಚರಿಯಲ್ಲಿ ದೂರನ್ನು ಬರೆಯಬಹುದು. ಠಾಣೆಯ ಅಧಿಕಾರಿಗಳು ನಿಮ್ಮನ್ನು ನ್ಯಾಯಧೀಶರ ಬಳಿ ಅಪ್ಪಣೆ ಪಡೆಯಲು ಅನುಮತಿ ನೀಡಬಹುದು. ಆದರೇ ನೀವು ನೇರವಾಗಿ ನ್ಯಾಯಧೀಶರನ್ನು ಸಹ ಕಂಡು, ಅವರೆದರು ದೂರನ್ನು ನೀಡಿ, ಫಿರ್ಯಾದು ಮಾಡಬಹುದಾಗಿದೆ. ಪೋಲಿಸರೇ ಇಂತಹ ಸಂಧರ್ಭದಲ್ಲಿ ಒಳಗಾಗಿದ್ದ ಪಕ್ಷದಲ್ಲಿ ನೀವು ನೇರವಾಗಿ ನ್ಯಾಯಧೀಶರನ್ನು ಕಾಣುವುದೇ ಉತ್ತಮ ಸಾಧನವಾಗಿದೆ.

ನೀವು ಆರಕ್ಷಕ ಠಾಣೆಯಲ್ಲಿ ಆಗಾಗ ನೀವು ಮಾಡಿರುವ ಅಪರಾಧವು ನ್ಯಾಯಸ್ಥಾನದಲ್ಲಿ ಅರ್ಹವೂ ಅನರ್ಹವೂ ಎಂದು ಪ್ರಶ್ನಿಸುತ್ತಿರಬೇಕು. ಉತ್ತಮ ಕಾರ್ಯವೆಂದರೆ ಸೂಕ್ತ ವಕೀಲರನ್ನು ಬೇಟಿಯಾಗಿ ಅವರು ನಿಮ್ಮ ಪರವಾಗಿ ಮಾತನಾಡುವಂತೆ ಸಹಾಯ ಮಾಡುವಂತೆ ಬೇಡುವುದು.

ಈ ಎಲ್ಲ ಅವಕಾಶಗಳೇ ಅಲ್ಲಿದೆ, ನೀವು ಉಚ್ಚ ನ್ಯಾಯಧೀಶರನ್ನು ಕಂಡು ಅಪರಾಧದಲ್ಲಿ ಸಿಲುಕಿರುವವರಿಂದ ಒಂದು ಶಾಂತಿ ಬಾಂಡ್ - ಕರಾರು ಪತ್ರವನ್ನು ಬರೆಸಿಕೊಳ್ಳ ಬಹುದು. ಈ ಕರಾರು ಪತ್ರವನ್ನು ಉಲ್ಲಂಘಿಸಿದಲ್ಲಿ ಅವರನ್ನು ಶಿಕ್ಷೆಗೆ ಸುಲಭವಾಗಿ ಗುರಿಪಡಿಸಬಹುದು. ಪೋಲಿಸಿನ ಕಡೆಯವರೇ ಈ ಅಪರಾಧದಲ್ಲಿ ಸೇರಿದ್ದಪಕ್ಷದಲ್ಲಿ ಅವರ ಮೇಲೆ ದೂರುನೀಡಿ ವಿಭಾಗೀಯ ತನಿಖೆಗೆ ಆಗ್ರಹ ಪಡಿಸಬಹುದು. ಹೈಕೋರ್ಟಿನಲ್ಲಿ ಅವರ ವಿರುಧ ರಿಟ್ ಪೆಟಿಷನ್ ಸಹ ಹಾಕಬಹುದು. ಈಗ ನಿಮಗೆ ಇರುವ ಮತ್ತೊಂದು ಅವಕಾಶ, ಸಾಧ್ಯತೆ ಎಂದರೆ ನೀವು ರಾಷ್ಟ್ರೀಯ ಅಥವಾ ರಾಜ್ಯ ಮಾನವ ಹಕ್ಕಿನ ಆಯೋಗವನ್ನು ಸಂಪರ್ಕಿಸಿ ಪೋಲಿಸರು ಹಕ್ಕನ್ನು ಉಲ್ಲಂಘಿಸುತ್ತಿರುವುದರ ಬಗ್ಗೆ ತಿಳಿಸಬಹುದು.

ನೆನಪಿರಲಿ : ಪೋಲಿಸರು, ಆರಕ್ಷಕರು ನಿಮಗೆ ಯಾವುದೇ ರೀತಿಯಲ್ಲಿ ತೊಂದರೆ ಕಿರುಕುಳ ನೀಡಿ ಅಪಮಾನಿಸಲಾಗದು. ಪೋಲಿಸರು ನ್ಯಾಯನೀತಿಯನ್ನು ಶಾಸನವನ್ನು ಮೀರಲಾಗದು. ಮತ್ತು ಅವರು ನ್ಯಾಯಾಂಗಕ್ಕಿಂತ ಮೇಲೆ ಇರುವವರಲ್ಲ, ತ್ರಾಸಕೊಡುವುದು, ಪೀಡಿಸುವುದು, ಬಲಾತ್ಕಾರದಿಂದ ಕಸಿದುಕೊಳ್ಳುವುದು ಇವುಗಳನ್ನು ಮಾಡಿದಲ್ಲಿ ಅವರ ವಿರುದ್ಧ ಅನೈತೀಕ ಚಟುವಟಿಕೆ ಎಂದು ಪರಿಗಣಿಸಿ ಅವರ ವಿರುದ್ಧ ಕ್ರಮ ತೆಗೆದುಕೊಳ್ಳಬಹುದು. ಅವರನ್ನು ಈ ವಿಷಯದಲ್ಲಿ ಸಸ್ಪೆಂಡ್ ಸಹ ಮಾಡಬಹುದು. ಕೆಲವು ನಿರ್ಧಿಷ್ಟ ಅಪರಾದಗಳಲ್ಲಿ ಅವರಿಗೆ ಭಾರತೀಯ ನೀತಿಸಂಹಿತೆ ಅನ್ವಯ ಶಿಕ್ಷಿಸಬಹುದು.

**ಹಾಗಾದರೆ ನಿಮ್ಮನ್ನು ಪೋಲಿಸರು ಬಂಧಿಸಿದಾಗ ನಿಮ್ಮ ಹಕ್ಕುಗಳನ್ನು ಮತ್ತು ನೀವೆನು ಮಾಡಬೇಕು ?**

**ನೀವು ಬಂಧಿಸಲ್ಪಟ್ಟಾಗ ನಿಮಗೆ ಈ ಕೆಳಗಿನ ಹಕ್ಕುಗಳಿವೆ :**

- ನಿಮ್ಮನ್ನು ಬಂಧಿಸಿದ್ದಕ್ಕಾಗಿ ಸೂಕ್ತ ಕಾರಣನೀಡಬೇಕು.
- ನಿಮ್ಮ ಹತ್ತಿರದ ಸಂಬಂಧಿಗೆ ಸ್ನೇಹಿತರಿಗೆ ನಿಮ್ಮ ಬಂಧನದ ವಿಷಯವಾಗಿ ತಿಳಿಸಿ ನೀವು ಎಲ್ಲಿ ಇರುವಿರೆಂದು ತಿಳಿಸಬಹುದು.
- ನೀವು ಒಬ್ಬ ವಕೀಲರನ್ನು ಭೇಟಿಯಾಗಿ ವಿಷಯತಿಳಿಸಿ ನಿಮ್ಮ ಪರವಾಗಿ ವಾದಿಸಲು ಹೇಳಬಹುದು.
- ನೀವು ವಕೀಲರನ್ನು ಕಂಡು ಸಹಾಯ ಪಡೆಯಲು ಸಾಧ್ಯವಾಗದಿದ್ದಲ್ಲಿ ಉಚಿತ ಕಾನೂನು ಸಲಹಾಕಾರರನ್ನು ಸಂಪರ್ಕಿಸಬಹುದು. ನಿಮ್ಮನ್ನು ನ್ಯಾಯಧಿಶರ ಮುಂದೆ ಹಾಜರು ಮಾಡಿದಾಗ ನೀವು ಅಂತಹ ಕಾನೂನು ನೆರವನ್ನು ಪಡೆಯಲು ಅನುಮತಿ ಬೇಡಬಹದು.
- ನಿಮ್ಮನ್ನು ಬೇಡಿ ಹಾಕಿ ಬಂಧಿಸಲಾಗದು. ಏನೇ ಆದರೂ ನಿಮ್ಮ ಮೇಲೆ ಬಲಪ್ರಯೋಗ ಮಾಡಬಹುದು. ನೀವು ಬಂಧನವನ್ನು ನಿರಾಕರಿಸಿದಲ್ಲಿ ಅವರು ಬಲವಂತ ಮಾಡಬಹುದು.
- ನೀವು ಬಂಧಿಸಿದ 24 ಗಂಟೆಗಳಲ್ಲಿ ನ್ಯಾಯಧೀಶರ ಮುಂದೆ ವಿಚಾರಣೆಗೆ ಹಾಜರಾಗಬೇಕು ಅವರು ಈ ಕಾರ್ಯ ಮಾಡದಿದ್ದಲ್ಲಿ ಅವರನ್ನು ಬಲವಂತ ಪಡಿಸಬೇಕು.
- ನೀವು ಜಾಮೀನಿಗೆ ಅರ್ಹವಾದ ಅಪರಾಧ ಮಾಡಿದ್ದಲ್ಲಿ ನೀವು ಖಂಡಿತ ಜಾಮಿನಿನ ಮೇಲೆ ಬಿಡುಗಡೆ ಪಡೆಯಬಹುದು.
- ನೀವು ಜಾಮೀನು ಸಿಗದಂತಹ ಅಪರಾಧ ಕೈಗೊಂಡಿದ್ದರೂ ನ್ಯಾಯಧೀಶರ ಮುಂದೆ ನಿಮ್ಮನ್ನು ಹಾಜರು ಪಡಿಸಿದಾಗ ಜಾಮೀನಿಗೆ ಅರ್ಜಿಸಲ್ಲಿಸಬಹುದು.
- ನಿಮ್ಮ ದೇಹವನ್ನು ವೈದ್ಯರು ತಪಾಸಣೆ ಮಾಡಬಹುದು. ನೀವು ಬಂಧಿತರಾದಾಗ ನಿಮ್ಮ ಮೈಮೇಲೆ ಆಗಿರುವ ಗಾಯದ ಗುರುತುಗಳನ್ನು ಅವರು ದಾಖಲಿಸಬೇಕು.
- ಪ್ರತಿ 48 ಘಂಟೆಗೊಮ್ಮೆ ವೈದ್ಯರು ನಿಮ್ಮ ದೇಹವನ್ನು ಪರೀಕ್ಷಿಸಬೇಕೆಂದು ನೀವೆ ಒತ್ತಾಯಿಸಬಹುದು.
- ವಾದ – ಪ್ರತಿವಾದಗಳ ಸಮಯದಲ್ಲಿ ವಿಚಾರಣೆಯ ಸಮಯದಲ್ಲಿ ನೀವು ನಿಮ್ಮ ವಕೀಲರನ್ನು ಕಾಣುವ ಹಕ್ಕು ನಿಮಗಿದೆ.
- ಪೋಲಿಸರು ನಿಮ್ಮ ವಿರುದ್ಧ ನೀವೆ ಹೇಳಿಕೆ ನೀಡಿರೆಂದು ಒತ್ತಾಯಿಸಲಾಗದು. ವಿಚಾರಣೆಯ ಸಮಯದಲ್ಲಿ ನಿಮ್ಮನ್ನು ಪ್ರಶ್ನಿಸಿದಾಗ ಮೌನವಾಗಿರಬಹುದು, ಉತ್ತರಿಸದೆ ಇರಬಹುದು.
- ನೀವು ಪೋಲಿಸರಿಗೆ ಹೇಳಿದ್ದೆಲ್ಲಾ ಸಾಕ್ಷಿಯಾಗಬೇಕಾಗಿಲ್ಲ, ಅವೆಲ್ಲಾ ನಿಮ್ಮ ವಿರುದ್ಧವಾಗಿ ಹೇಳಿಕೆ ಆಗಬೇಕಾಗಿಲ್ಲ.
- ಪೋಲಿಸರು ನಿಮ್ಮ ಮೇಲೆ ಮೂರನೆ ಸ್ಥರದ ಶಿಕ್ಷೆ ನೀಡಲಾಗದು ಅಥವಾ ಬಲವಂತ ಮಾಡಲಾಗದು.

**ನೀವು ಬಂಧಿಸಲ್ಪಟ್ಟಾಗ ಈ ಕಾರ್ಯಗಳನ್ನು ಕೈಗೊಳ್ಳಬಹುದು :**

- ನಿಮಗೆ ಆಪ್ತರಾದ, ನಂಬಿಕಸ್ತ ವಕೀಲರ ದೂರವಾಣಿ ಸಂಖ್ಯೆವನ್ನು ಸದಾ ಜೊತೆಯಲ್ಲಿ ಹೊಂದಿರಬೇಕು. ಅಥವಾ ಅಂತಹವರನ್ನು ಕರೆತರುವಂತಹ ಮಿತ್ರರನ್ನು ಹೊಂದಿರಬೇಕು. ನಿಮ್ಮ ಬಂಧನ ಆದಕೊಡಲೇ ಅವರು ನಿಮ್ಮ ಬಳಿ ಬರುವಂತಿರಬೇಕು.
- ನೀವು ಬಂಧಿತರಾಗುವುದು ನಿಶ್ಚಿತವಾದಾಗ, ಜಾಮೀನಿಗೆ ಮುಂಚಿತವಾಗಿ (Anticipatory Bail) ಅರ್ಜಿಸಲ್ಲಿಸುವುದು ಅತ್ಯಂತ ಸಮಂಜಸವಾದುದು .
- ಒಮ್ಮೆ ನೀವು ಬಂಧಿತರಾದಿರೆಂದರೆ ಅದನ್ನು ತಿರಸ್ಕರಿಸಬೇಡಿ. ವಿರೋಧಿಸಬೇಡಿ. ಆನಂತರದಲ್ಲಿ ನೀವು ಸೂಕ್ತ ಕಾನೂನಿನ ಸಲಹೆ ಸಹಾಯ ಪಡೆಯಬಹದು.
- ನೀವು ನಿಮ್ಮ ಹಕ್ಕಿನ ಬಗ್ಗೆ ಅರಿವಿದೆಯೆಂದು ದೃಢಚಿತ್ತರಾಗಿ ಪೋಲಿಸರಿಗೆ ಮನವರಿಕೆ ಮಾಡಿಕೊಡಿ ಮತ್ತು ಅವರು ಮಾಡುತ್ತಿರುವ ಕಾರ್ಯವು ನ್ಯಾಯಬಾಹಿರವಾದುದೆಂದು ತಿಳಿಸಿ.

ನೀವು ಪುರುಷಕಾಮಿಗಳಾಗಿ ಬೇರೆ ಇತರ ಹಕ್ಕೆಗಳನ್ನು ಹೊಂದಿರುವಿರಾ? ಅರಿತಿರುವಿರಾ? ಹೌದು ಖಂಡಿತವಾಗಿ : ಇತರೆ ಸ್ವಾಸ್ಥ್ಯದ ಕುರಿತಾದ ಹಾಗು ಲೈಂಗಿಕ ಹಕ್ಕುಗಳ ಬಗ್ಗೆ ಸಹ ಅರಿತಿರಬೇಕು.

**ಆರೋಗ್ಯ ಸ್ವಾಸ್ಥ್ಯದ ಹಕ್ಕುಗಳು :** ಇವುಗಳು ಜೀವನದ ಹಕ್ಕುಗಳಾಗಿ  ಉದ್ಭವಿಸುತ್ತವೆ ಅವುಗಳನ್ನು ಈ ಮೇಲೆ ಹೇಳಲಾಗಿದೆ ಯಾವ ವ್ಯಕ್ತಿಯೇ ಆಗಲಿ ನಿಮ್ಮ ಅನುಮತಿಯಿಲ್ಲದೆ ಪೂರ್ಣ ಮುಕ್ತ ಸಮ್ಮತಿಯಿಲ್ಲದೆ ನಿಮ್ಮ ದೇಹದ ಮೇಲೆ ಆಕ್ರಮಣ ಮಾಡಬಾರದು.

ಪೂರ್ಣ ಸಹಮತಿ ಒಪ್ಪಿಗೆ ಎಂದರೆ ವೈದ್ಯರು ಸಹ ನಿಮ್ಮ ಅನುಮತಿ ಇಲ್ಲದೆ ಅವರಿಗಿಷ್ಟಬಂದಂತೆ ವರ್ತಿಸಿ ಪರೀಕ್ಷೆ ಚಿಕಿತ್ಸೆ ನೀಡಲಾಗದು. ಅವುಗಳಿಂದ ಉಂಟಾಗುವ ದುಷ್ಪರಿಣಾಮುಗಳಿಗೆ ವೈದ್ಯರೆ ಭಾಗಿಗಳಾಗಬೇಕಾಗುತ್ತದೆ. ವೈದ್ಯರೇ ಆಗಲಿ ಅಥವಾ ಬೇರೆ ಯಾರೇ ಆಗಲಿ ನಿಮ್ಮನ್ನು ಹೆಚ್ ಐ ವಿ ಪರೀಕ್ಷೆಗೆ ಗುರಿ ಪಡಿಸಲಾಗದು. ಇದನ್ನು ಮಾಡುವ ಮೊದಲು ಸೂಕ್ತ ಆಪ್ತಸಲಹಾಕಾರ್ಯವು ಆಗಿದ್ದು ಅದಕ್ಕೆ ನೀವು ಒಪ್ಪಿಗೆ ನೀಡಿರಬೇಕು. ನಿಮ್ಮ ಒಪ್ಪಿಗೆಯು ಸಹ ಮುಕ್ತವಾಗಿ, ನಿರ್ಬಂಧಿತವಾಗಿರಬೇಕು ಅಂದರೆ ಯಾರು ನಿಮ್ಮನ್ನು ಪರೀಕ್ಷೆ ಹೊಂದಲು ಬಲಾತ್ಕಾರ ಮಾಡಬಾರದು, ಅವಿಧೇಯರಂತೆ ವರ್ತಿಸಿ ಹಿಂಸಿಸಬಾರದು. ಹಾಗೇನಾದರೂ ನಿಮ್ಮ ಇಚ್ಛೆಗೆ ವಿರುದ್ದವಾಗಿ ಹೆಚ್ ಐ ವಿ ಪರೀಕ್ಷೆ ಅಥವಾ ಬೇರಾವುದೇ ಪರೀಕ್ಷೆ ನಡೆಸಿದಲ್ಲಿ ನೀವು ನ್ಯಾಯಂಗದ ಮೊರೆಹೊಕ್ಕು ವೈದ್ಯರ ಅಥವಾ ಆಸ್ಪತ್ರೆಯ ವಿರುದ್ದ ಕ್ರಮತೆಗೆದುಕೊಳ್ಳಬಹುದು.

ನಿಮ್ಮ ಮೇಲೆ ನಡೆಸುವ ಯಾವುದೇ ಪರೀಕ್ಷೆಯ ಫಲಿತಾಂಶಗಳು ಅತ್ಯಂತ ಗೌಪ್ಯವಾಗಿರಬೇಕು. ಅದನ್ನು ಅವರು ಮೀರಿದಲ್ಲಿ ನೀವು ನ್ಯಾಯದ ರೀತಿಯಲ್ಲಿ ಮುಕದ್ದಮೆ ಹೂಡಬಹುದು. ನೀವು ಹೆಚ್ ಐ ವಿ ಪಾಸಿಟಿವ್ ಆಗಿದ್ದರೂ ನೀವು ಯಾವುದಕ್ಕೂ ಹೆದರದ ನ್ಯಾಯದರೀತಿಯಲ್ಲಿ ಕ್ರಮ ಕೈಗೊಂಡು

ಮುನ್ನಗ್ಗಬಹುದು. ನ್ಯಾಯಾಲಯಕ್ಕೆ ನೀವು ಹೆಚ್ ಐ ವಿ ಯಿಂದ ಪೀಡಿತರೆಂದು ಹೇಳುವುದರಿಂದ ಯಾವುದೇ ರೀತಿಯ ಅವಮಾನವೂ ಆಗುವುದಿಲ್ಲ ಈಗ ನೀವು ಸುಳ್ಳು ಹೆಸರಿನಿಂದ (ನಿಮ್ಮ ನಿಜವಾದ ಹೆಸರನ್ನು ಮುಚ್ಚಿಟ್ಟು) ಕ್ರಮ ಕೈಕೊಳ್ಳಬಹುದು.

ನೀವು ಯಾವುದೇ ರಾಜ್ಯ ಸರ್ಕಾರದ ವೈದ್ಯಕೀಯ ಸಂಸ್ಥೆಯಿಂದ ಔಷಧೋಪಚಾರ ಪಡೆಯುವ ಹಕ್ಕು ನಿಮಗಿದೆ ನೀವು ಪುರುಷಕಾಮಿ ಎಂಬ ಬೇಧಭಾವ ಇದರಲ್ಲಿ ಬರುವುದಿಲ್ಲ, ಅಲ್ಲದೇ ಯಾವುದೇ ರಾಜ್ಯದ ವೈದ್ಯಕೀಯ ಸಂಸ್ಥೆಯು ನಿಮಗೆ ಚಿಕಿತ್ಸೆ ನೀಡಲು ನಿರಾಕರಿಸಲಾಗದು. ಹಾಗೇನಾದರೂ ಅವರು ನಿರಾಕರಿಸಿದಲ್ಲಿ ನೀವು ಕಾನೂನುರೀತಿಯ ಕ್ರಮ ಕೈಗೊಂಡು ಪರಿಹಾರವನ್ನು ಪಡೆಯಬಹುದಾಗಿದೆ.

ಲೈಂಗಿಕ ಹಕ್ಕುಗಳು ಉದ್ಭವಿಸುವುದು ಹೇಗೆಂದರೆ ನೀವು ನಿಮ್ಮ ದೇಹದ ಪೂರ್ಣ ಯಜಮಾನರು ಯಾರು ಇದರ ಮೇಲೆ ಬಲಿತ್ಕಾರ, ಹಕ್ಕನ್ನು ನಿಮ್ಮ ಇಚ್ಛೆಯವಿರುದ್ದ ನಡೆಸಲಾಗದು. ಆದಕಾರಣ ಯಾರೇ ಆಗಲಿ ಸ್ತ್ರೀ ಪುರುಷರಾಗಲಿ ನಿಮ್ಮ ಮೇಲೆ ಬಲಾತ್ಕಾರವಾಗಿ ಲೈಂಗಿಕ ಸಂಭೋಗ ನಡೆಸಲಾಗದು. ಹಾಗೇನಾದರೂ ನೀವು ಬಿದ್ದ ಸುರಕ್ಷಿತ ವಿದಾನದಲ್ಲಿ ಲೈಂಗಿಕ ಕ್ರಿಯೆಯಲ್ಲಿ ತೊಡಗಬಯಸಿದಾಗ, ಆಗ ಅವರು ಅಸುರಕ್ಷಿತ. ಅಪಾಯಕಾರಿ ಲೈಂಗಿಕ ಸಂಭೋಗದಲ್ಲಿ ಬಲವಂತ ಮಾಡಲಾಗದು.

ಇಂತಹ ಬಲಾತ್ಕಾರದ ಪ್ರಕ್ರಿಯೆಗಳು ಲೈಂಗಿಕ ಹಲ್ಲೆದಾಳಿ ಎಂದು ನಿರ್ಧರಿಸಿ ಶಿಕ್ಷೆಗೆ ಗುರಿಪಡಿಸಬಹುದು. ಅಂತಹವರ ಮೇಲೆ ನ್ಯಾಯಾಂಗ ತನಿಖೆ, ವಿಚಾರಣೆ ನಡೆಸಿ ಪರಿಹಾರವನ್ನು ಪಡೆಯಬಹುದು.

ಸಾಮಾನ್ಯವಾಗಿ ಸ್ಥಳೀಯ ಪುರುಷಕಾಮಿ ಲೈಂಗಿಕ ಸ್ವಾಸ್ಥ್ಯಗಳು ನೀವು ಕಷ್ಟದಲ್ಲಿ ಸಿಲುಕಿಕೊಂಡ ಪರಿಸ್ಥಿತಿಯಲ್ಲಿ ಮುಂದೆ ಬಂದು ತೊಂದರೆ ನಿವಾರಿಸಬಹುದು. ಹಕ್ಕುಗಳನ್ನು ಉಲ್ಲಂಘಿಸಿ ನಿಂತಾಗ ಪ್ರತಿಭಟಿಸಬಹುದು. ಇಂತಹ ನ್ಯಾಯಪರ ಸಂಸ್ಥೆಗಳು ನಿಮಗೆ ನ್ಯಾಯಲಯದ ತೀರ್ಪಿನ ತನಕ ಸಹಾಯ ಮಾಡಬಹುದು. ಆದಕಾರಣ ನೀವು ಅಂತಹ ಸಂಸ್ಥೆಗಳ ದೂರವಾಣಿ ಸಂಖ್ಯೆಯನ್ನು ಬಳಿ ಇಟ್ಟುಕೊಂಡು ನಿಮಗೆ ಅವಶ್ಯವೆನಿಸಿದಾಗ ಅವರ ಸಹಾಯ ಸಹಕಾರ ಪಡೆಯಬಹುದು. ನೀವು ನಿಮ್ಮ ಹಕ್ಕಿನ ಬಗ್ಗೆ ಅರಿತು ಅದನ್ನು ಅಭ್ಯಾಸದಲ್ಲಿ ತೊಡಗಿಸದಿದ್ದರೆ, ಇತರರು ಅದನ್ನು ಉಲ್ಲಂಪಿಸಿ ಮುಂದುವರಿಯುತ್ತಿರುತ್ತಾರೆ.